**ಸಾಕ್ಷಿಯನ್ನು ಇಂದು ದಿನಾಂಕಃ 11-11-2019 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- 2 ರಿಂದ 8, 10 ರಿಂದ 12, 32 ರಿಂದ 34 ಪ್ರತಿವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ**

ನಾನು ಈಗ ಪುಣೆಯಲ್ಲಿ ಇರುತ್ತೆನೆ. ನನ್ನ ಹೊಲ ಮತ್ತು ಮನೆ ಹೆಬಳ್ಳಿ ಗ್ರಾಮದಲ್ಲಿ ಇರುತ್ತದೆ. 15 ವರ್ಷಗಳಿಂದ ನಾನು ಪುಣೆಯಲ್ಲಿ ಇರುತ್ತೆನೆ. ದಾವಾ ಆಸ್ತಿಯ ಸರ್ವೆಯನ್ನು ದಾವೆ ಹೂಡುವುದಕ್ಕಿಂತ ಮುಂಚೆ ಮಾಡಿಸಿದ್ದೆನೆ. ಆದರೆ ಸರ್ವೆ ಮಾಡಿಸಿದ ಬಗ್ಗೆ ಯಾವುದೇ ದಾಖಲೆ ಇಲ್ಲ. ಸರ್ವೆ ನಂ.30 ಒಟ್ಟಾಗಿ 28 ಎಕರೆ 23 ಗುಂಟೆ ಇತ್ತು ಎಂದರೆ ಸರಿ. ಸರ್ವೆ ನಂ.30 ಇದು ಹಿಸ್ಸಾ ಸರ್ವೆ ಆದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಸುಮಾರು 94 ಜನ ಅತೀಕ್ರಮಣ ಮಾಡಿದ್ದಾರೆ ಎಂದು ಹೇಳಿ ನಾನು ಒಂದು ಮಧ್ಯಂತರ ಅರ್ಜಿಯನ್ನು ದಿ.08.01.2015 ರಂದು ಹಾಕಿದ್ದೆ ಎಂದರೆ ಸರಿ. ಕೆಲವೊಂದು ಪ್ರತಿವಾದಿಗಳ ವಿರುದ್ಧ ನಾವು ದಾವೆಯನ್ನು ನಡೆಸುವುದಿಲ್ಲ ಎಂದು ದಿ.28.03.2016 ರಂದು ಒಂದು ಮೇಮೊವನ್ನು ನ್ಯಾಯಾಲಯದ ಮುಂದೆ ಸಲ್ಲಿಸಿದ್ದೆನೆ ಎಂದರೆ ಸರಿ.

ಪ್ರತಿವಾದಿಗಳು ಎಷ್ಟು ವರ್ಷಗಳಿಂದ ದಾವಾ ಆಸ್ತಿಯ ಸ್ವಾಧಿನದಲ್ಲಿ ಇದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಗಳ ಹೆಸರುಗಳ ಪಂಚಾಯಿತಿಯಲ್ಲಿ ನೊಂದಣೆಯಾಗಿದೆಯೊ ಇಲ್ಲವೊ ಎಂದು ನಾನು ವಿಚಾರಣೆ ಮಾಡಿದ್ದೆನೆ ಆದರೆ ಪಂಚಾಯಿತಿಯವರು ಯಾವುದೇ ವಿಷಯವನ್ನು ನನಗೆ ಹೇಳಿಲ್ಲ. ಪಂಚಾಯಿತಿಯವರನ್ನು ಬಾಯಿಮಾತಿನಿಂದ ವಿಚಾರಣೆ ಮಾಡಿದ್ದೆನೆ ಪಂಚಾಯಿತಿಯವರು ಅರ್ಜಿ ತೆಗೆದುಕೊಂಡಿಲ್ಲ. ನನ್ನ ಬಳಿ ಅರ್ಜಿ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ. ಪಂಚಾಯಿತಿಯಲ್ಲಿ ನಾನು ವಿಚಾರಣೆ ಮಾಡಿದ ಬಗ್ಗೆ ಹಾಗೂ ಪಂಚಾಯಿತಿಯವರು ಯಾವುದೇ ದಾಖಲೆಗಳನ್ನು ನೀಡದೆ ಇರುವುದರ ಬಗ್ಗೆ ದಾವಾ ಹೂಡುವ ಸಮಯಕ್ಕೆ ವಕೀಲರಿಗೆ ಮಾಹಿತಿ ನೀಡಿಲ್ಲ.

9 ನೇ ಪ್ರತಿವಾದಿ ಆನಂದರಾಯ ಇವರು ಜೀವಂತವಾಗಿ ಇದ್ದಾರೊ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಅವರು ತೀರಿಕೊಂಡಿದ್ದಾರೆ ಎಂದು ನ್ಯಾಯಾಲಯದ ಮುಂದೆ ವರದಿ ಸಲ್ಲಿಸಲಾಗಿದೆ ಆದರೂ ಸಹ ಅವರ ವಾರಸುದಾರರ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ಭೀಮಶಾ ಇತನು 2 ಜಾಗದಲ್ಲಿ ಸ್ವಾಧಿನದಲ್ಲಿ ಇದ್ದಾನೆ. 1 ಪ್ಲಾಟನ್ನು ಖರೀದಿ ತೆಗೆದುಕೊಂಡಿದ್ದಾನೆ ಇನ್ನೊಂದು ಪ್ಲಾಟನ್ನು ನಮ್ಮ ಜಮೀನಿನಲ್ಲಿ ಅಕ್ರಮವಾಗಿ ಸ್ವಾಧಿನದಲ್ಲಿ ಇದ್ದಾನೆ. 2 ನೇ ಪ್ರತಿವಾದಿಯು ಎಷ್ಟು ವಿಸ್ತೀರ್ಣದಲ್ಲಿ ಕಬ್ಜೆಯಲ್ಲಿ ಇದ್ದಾನೆ ಎಂದು ಮತ್ತು ಅದರ ಚಕ್ಕು ಬಂದಿ ಹೇಳಲು ಬರುವುದಿಲ್ಲ. ಆತ ಯಾವ ದಿನಾಂಕದಿಂದ ಸ್ವಾಧಿನದಲ್ಲಿ ಇದ್ದಾನೆ ಎಂದು ಸಹ ಹೇಳಲು ಬರುವುದಿಲ್ಲ.

3 ನೇ ಪ್ರತಿವಾದಿ ಎಷ್ಟು ಜಾಗದಲ್ಲಿ ಎಂದಿನಿಂದ ಕಬ್ಜೆಯಲ್ಲಿ ಇದ್ದಾನೆ ಮತ್ತು ಅದರ ಚತುರಶಿಮಾವನ್ನು ಹೇಳಲು ಬರುವುದಿಲ್ಲ. 4 ನೇ ಪ್ರತಿವಾದಿಯ ತಂದೆಯ ಹೆಸರು ನಮಗೆ ಗೊತ್ತಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿ ಎಷ್ಟು ಜಾಗದಲ್ಲಿ ಎಂದಿನಿಂದ ಕಬ್ಜೆಯಲ್ಲಿ ಇದ್ದಾನೆ ಮತ್ತು ಅದರ ಚತುರಶಿಮಾವನ್ನು ಹೇಳಲು ಬರುವುದಿಲ್ಲ. 5 ನೇ ಪ್ರತಿವಾದಿ ಎಷ್ಟು ಜಾಗದಲ್ಲಿ ಎಂದಿನಿಂದ ಕಬ್ಜೆಯಲ್ಲಿ ಇದ್ದಾನೆ ಮತ್ತು ಅದರ ಚತುರಶಿಮಾವನ್ನು ಹೇಳಲು ಬರುವುದಿಲ್ಲ. 4 ರಿಂದ 8, 10 ರಿಂದ 12, 13 ರಿಂದ 35 ನೇ ಪ್ರತಿವಾದಿ ಎಷ್ಟು ಜಾಗದಲ್ಲಿ ಎಂದಿನಿಂದ ಕಬ್ಜೆಯಲ್ಲಿ ಇದ್ದಾರೆ ಮತ್ತು ಅದರ ಚತುರಶಿಮಾವನ್ನು ಹೇಳಲು ಬರುವುದಿಲ್ಲ. ಪ್ರತಿವಾದಿಗಳೆಲ್ಲರೂ ನಮ್ಮ ಜಾಗದಲ್ಲಿ ಅಕ್ರಮ ಸ್ವಾಧಿನದಲ್ಲಿ ಇಲ್ಲ 12 ಜನ ಪ್ರತಿವಾದಿಗಳು ಮಾತ್ರ ಅಕ್ರಮ ಸ್ವಾಧಿನದಲ್ಲಿ ಇದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ 12 ಜನ ಪ್ರತಿವಾದಿಗಳು ಎಂದಿನಿಂದ, ಎಷ್ಟು ಜಾಗದಲ್ಲಿ ಸ್ವಾಧಿನದಲ್ಲಿ ಇದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ.

ನನ್ನ ತಂದೆ ಬಹಳ ವರ್ಷಗಳಿಂದ ಮಾನಸಿಕವಾಗಿ ಅಸ್ವಸ್ತವಾಗಿ ಇದ್ದಾರೆ. ಎಷ್ಟು ವರ್ಷಗಳಿಂದ ಅಸ್ವಸ್ತವಾಗಿದ್ದಾರೆ ಎಂದು ಹೇಳಲು ಬರುವುದಿಲ್ಲ. ನನ್ನ ತಂದೆ ಯಾರಿಗೂ ಸಹ ದಾವಾ ಜಮೀನನ್ನು ಅಥವಾ ಪ್ಲಾಟಗಳನ್ನಾಗಿ ಮಾಡಿ ಮಾರಾಟ ಮಾಡಿಲ್ಲ. 2 ರಿಂದ 35 ನೇ ಪ್ರತಿವಾದಿಗಳು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಸದರಿ ಮನೆಗಳಲ್ಲಿ ವಿದ್ಯುತ್ತಚ್ಚಕ್ತಿ ಸಂಪರ್ಕ ಪಡೆದಿದ್ದಾರೆ ಎಂದರೆ ಸರಿ. 2 ರಿಂದ 35 ನೇ ಪ್ರತಿವಾದಿಗಳು ಮನೆಗಳನ್ನು ಕಟ್ಟಿಕೊಂಡಿರುವ ವಿಷಯ ಮತ್ತು ವಿದ್ಯುತ್ತಚ್ಚಕ್ತಿ ಪಡೆದುಕೊಂಡಿರುವ ವಿಷಯ ನನಗೆ ಮತ್ತು ನನ್ನ ತಂದೆಗೆ ಗೊತ್ತಿದೆ ಎಂದರೆ ಸರಿ. ಜರ್ಬದಸ್ತಿಯಿಂದ ಅಕ್ರಮವಾಗಿ ಪ್ರತಿವಾದಿಗಳು ಕಬ್ಜೆ ಪಡೆದುಕೊಂಡಿದ್ದಾರೆ ಎಂದು ಪೋಲಿಸ ಮುಂದೆ ಪಿರ್ಯಾದಿ ನೀಡಿಲ್ಲ. ಜರ್ಬದಸ್ತಿಯಿಂದ ಅಕ್ರಮವಾಗಿ ಪ್ರವೇಶ ಮಾಡುವ ವೇಳೆಗೆ ನಾನು ಚಿಕ್ಕ ವಯಸ್ಸಿನವನು ಇದ್ದೆ ನನ್ನ ತಂದೆ ಮಾನಸಿಕವಾಗಿ ಅಸ್ವಸ್ಥನಾಗಿದ್ದರಿಂದ ಯಾವುದೇ ಪಿರ್ಯಾದಿ ನೀಡಿಲ್ಲ ಎಂದು ಸಾಕ್ಷಿ ಸ್ವತಹ ನುಡಿಯುತ್ತಾರೆ.

ಸೈಯದ ಅಮೀರ ಪಟೇಲ ಮತ್ತು ನನ್ನ ತಂದೆ ವಾದಿ ನಡುವೆ ಪಾಲು ಆದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಏಕೆಂದರೆ ಯಾವುದೇ ಪಾಲು ಆಗಿರುವುದಿಲ್ಲ. ಪಹಣಿಯು ನನ್ನ ತಂದೆಯ ಹೆಸರಿನಲ್ಲಿ ಅಥವಾ ಸೈಯದ ಅಮೀರ ಪಟೇಲ ಇವರ ಹೆಸರಿನಲ್ಲಿ ಹೇಗೆ ಬಂದಿದೆ ಎಂಬುದು ಗೊತ್ತಿಲ್ಲ. ದಾವಾ ಆಸ್ತಿ ವಿಸ್ತೀರ್ಣ 6 ಎಕರೆ 23 ಗುಂಟೆ ಇದೆ. 6 ಎಕರೆ 23 ಗುಂಟೆ ಜಮೀನಿನಲ್ಲಿ 3 ಎಕರೆ 20 ಗುಂಟೆ ಜಮೀನಿನಲ್ಲಿ 2 ರಿಂದ 35 ನೇ ಪ್ರತಿವಾದಿಗಳು ಅಕ್ರಮವಾಗಿ ಮನೆಕಟ್ಟಿಕೊಂಡು ಇದ್ದಾರೆ ಇನ್ನೂ ಉಳಿದ ಜಮೀನು ನಮ್ಮ ಕಬ್ಜೆಯಲ್ಲಿ ಇದೆ. ಪೂರ್ತಿ 6 ಎಕರೆ 23 ಗುಂಟೆಯಲ್ಲಿ 2 ರಿಂದ 35 ನೇ ಪ್ರತಿವಾದಿಗಳು ಮತ್ತು ಇನ್ನಿತರ ಜನರು ಮನೆಕಟ್ಟಿಕೊಂಡು ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಿ.23.01.2013 ರಂದು 95 ಜನರು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದಾರೆ ಎಂದು ಅರ್ಜಿ ನೀಡಿದ್ದೆನೆ ಎಂದರೆ ದಾವಾ ಆಸ್ತಿಗೆ ಸಂಬಂಧಪಟ್ಟವರು ಇದ್ದರು ಎಂದು ಅರ್ಜಿ ನೀಡಿದ್ದೆನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಅರ್ಜಿಯಲ್ಲಿ ನಮೂದು ಮಾಡಿದ ಜನರು ಎಷ್ಟು ವರ್ಷಗಳಿಂದ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧಿನದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ

ಎಂದರೆ ಸರಿ. ಆದರೆ ಅವರೆಲ್ಲರೂ ಅಕ್ರಮವಾಗಿ ಸ್ವಾಧಿನದಲ್ಲಿ ಇದ್ದಾರೆ ಹಾಗಾಗಿ ದಾವೆ ಹೂಡಿದ್ದೆವೆ ಎಂದು ಸಾಕ್ಷಿ ಸ್ವತಹ ನುಡಿಯುತ್ತಾರೆ. ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಮಾಲಿಕನಲ್ಲ ಮತ್ತು ಕಬ್ಜೆದಾರನಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಹಣಿಯು ನನ್ನ ತಂದೆ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ.

ನನ್ನ ಪ್ರಕಾರ ದಾವಾ ಆಸ್ತಿಯು 2010 ನೇ ಇಸ್ವಿಯಲ್ಲಿ ಎಕರೆಗೆ ಎರಡುವರೆ ಲಕ್ಷ ರೂ. ಇತ್ತು ಎಂದರೆ ಗೊತ್ತಿಲ್ಲ ಇನ್ನೂ ಹೆಚ್ಚಿಗೆ ಮೌಲ್ಯ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಇಂದಿಗೆ ಗುಂಟೆಗೆ 2 ಲಕ್ಷ ರೂಪಾಯಿ ಮೌಲ್ಯ ಇದೆ. ನನ್ನ ತಂದೆಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.